## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 293+308+206

ಸದಸ್ಯರ ಹೆಸರು : ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)
ಶ್ರೀ ಅರುಣ್ ಶಹಾಪೂರ (ಶಿಕ್ಷಕರ ಕ್ಷೇತ್ರ)
ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 17-02-2022

ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯ ಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ 6ನೇ ವೇತನ ಆಯೋಗದ ವರದಿಯನ್ನು ಜಾರಿಗೆ ತಂದಿದ್ದರೂ ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರುಗಳ ವೇತನದಲ್ಲಿ ತಾರತಮ್ಯ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| (ಆ) | ದೇಶದಲ್ಲಿ ಹಲವು ರಾಜ್ಯಗಳು ಅಲ್ಲಿನ ನೌಕರರುಗಳಿಗೆ ಕೇಂದ್ರ ಸರ್ಕಾರದ ಸರ್ಕಾರಿ ನೌಕರರಿಗೆ ಸಮಾನಾಂತರವಾಗಿ ವೇತನ/ಪಿಂಚಣಿ ಸೌಲಭ್ಯವನ್ನು ನೀಡುತ್ತಿದ್ದು, ನಮ್ಮ ರಾಜ್ಯದಲ್ಲಿ ಸದರಿ ಸೌಲಭ್ಯವನ್ನು ಜಾರಿಗೆ ತರದೆ ತಾರತಮ್ಯವೆಸಗಲು ಕಾರಣವೇನು; | ರಾಜ್ಯ ಸರ್ಕಾರವು ಸಾಂಪ್ರದಾಯಿಕವಾಗಿ ಕೇಂದ್ರ ಸರ್ಕಾರ/ಇತರ ರಾಜ್ಯ ಸರ್ಕಾರಗಳು ರಚಿಸುವ ವೇತನ ಆಯೋಗಗಳ ಶಿಫಾರಸ್ಸು ಹಾಗೂ ವೇತನ ಪರಿಷ್ಕರಣೆಯ ಅವಧಿಯನ್ನು ಅನುಸರಿಸದೇ ತನ್ನದೇ ಆದ ವೇತನ ಆಯೋಗ/ವೇತನ ಸಮಿತಿಗಳಂತಹ ತಜ್ಞ ಸಮಿತಿಗಳ ಶಿಫಾರಸ್ಸಿನ ಮೇರೆಗೆ ತನ್ನದೇ ಆದ ವಿಶಿಷ್ಟ ವೇತನ ರಚನೆಯನ್ನು ಅಳವಡಿಸಿಕೊಂಡಿದ್ದು, ಅದನ್ನು ಕಾಲದಿಂದ ಕಾಲಕ್ಕೆ ಪರಿಷ್ಕರಿಸಿಕೊಂಡು ಬಂದಿರುತ್ತದೆ. ಇದು |



Generated from eOffice by G JAGADEESHA, CMO-JS(GJ), JOINT SECRETARY, CMO on 14/02/2022 03:42 PM

| | | |
|---|---|---|
| | | ರಾಜ್ಯ ಸರ್ಕಾರದ ನೀತಿಯಾಗಿರುತ್ತದೆ. ಆದುದರಿಂದ, ಕೇಂದ್ರ ಸರ್ಕಾರದ ನಿಯಮಗಳು ಮತ್ತು ಕೇಂದ್ರ ವೇತನ ಆಯೋಗ ಮತ್ತು ಇತರೆ ರಾಜ್ಯ ವೇತನ ಆಯೋಗಗಳ ಶಿಫಾರಸ್ಸುಗಳನ್ನು ರಾಜ್ಯ ಸರ್ಕಾರದ ನೌಕರರಿಗೆ ಹೋಲಿಸಿ ಅನ್ವಯಿಸಲು ಬರುವುದಿಲ್ಲ. ಆದುದರಿಂದ, ಕೇಂದ್ರ ಸರ್ಕಾರದ ಹುದ್ದೆ ಮತ್ತು ಹುದ್ದೆಗಳಿಗೆ ನಿಗದಿಪಡಿಸಿರುವ ವೇತನ ಶ್ರೇಣಿಗಳನ್ನು ರಾಜ್ಯ ಸರ್ಕಾರದ ಹುದ್ದೆಗಳಿಗೆ ಅನ್ವಯಿಸಿ ಹೋಲಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. |
| (ಇ) | ರಾಜ್ಯದ ಸರ್ಕಾರಿ ನೌಕರರಿಗೆ ಕೇಂದ್ರ ಸರ್ಕಾರದ ಸರ್ಕಾರಿ ನೌಕರರಿಗೆ ನೀಡುತ್ತಿರುವ ಕೇಂದ್ರದ 7ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತರಲು ಯಾವ ಕ್ರಮ ಕೈಗೊಳ್ಳಲಾಗುವುದು; | ಮೇಲಿನ ಉತ್ತರ (ಆ)ದಿಂದ ಉದ್ಭವಿಸುವುದಿಲ್ಲ. |
| (ಈ) | ಈ ರೀತಿ ವೇತನ ತಾರತಮ್ಯವನ್ನು ನಿವಾರಿಸುವುದರಿಂದ ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸಲು ಸಾಧ್ಯವೆಂಬ ಕಲ್ಪನೆಯಿಲ್ಲದಿರಲು ಕಾರಣವೇನು; | |
| (ಉ) | ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಖಿಲ ಭಾರತ ಸೇವೆಯ ಅಧಿಕಾರಿಗಳಿಗೆ ಈಗಾಗಲೇ 7ನೇ ವೇತನ ಆಯೋಗದ ಶಿಫಾರಸ್ಸಿನಡಿಯಲ್ಲಿ ಸಂಬಳ ಸೌಲಭ್ಯವನ್ನು ನೀಡುತ್ತಿರುವುದರಿಂದ | ಕರ್ನಾಟಕ ರಾಜ್ಯವೂ ಸೇರಿದಂತೆ ಭಾರತದ ಇತರೆ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಖಿಲ ಭಾರತ ಸೇವೆಯ ಅಧಿಕಾರಿಗಳ ವೇತನ ಮತ್ತು ಭತ್ಯೆಗಳನ್ನು ಕೇಂದ್ರ ಸರ್ಕಾರದ ವೇತನ ಮತ್ತು ಸೇವಾ ನಿಯಮಗಳ ಪ್ರಕಾರ |



Generated from eOffice by G JAGADISHA, CMO-JS(GJ), JOINT SECRETARY, CMO on 14/02/2022 03:42 PM

| | | |
|---|---|---|
| | ಅವರ ಕೈಕೆಳಗೆ ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುತ್ತಿರುವ ರಾಜ್ಯ ಸರ್ಕಾರಿ ನೌಕರರುಗಳಿಗೆ ಈ ತಾರತಮ್ಯ ಮಾಡಿರುವುದು ಅನ್ಯಾಯವಲ್ಲವೇ? | ಪಾವತಿಸಲಾಗುತ್ತದೆ. ರಾಜ್ಯ ಸರ್ಕಾರದ ವೇತನ ಮತ್ತು ಸೇವಾ ನಿಯಮಗಳು ಅಖಿಲ ಭಾರತ ಸೇವೆಯ ನೌಕರರಿಗೆ ಅನ್ವಯಿಸುವುದಿಲ್ಲ. ಅಖಿಲ ಭಾರತ ಸೇವೆಯ ಹುದ್ದೆಗಳನ್ನು ರಾಜ್ಯ ಸರ್ಕಾರದ ಅಧೀನದಲ್ಲಿ ಬರುವ ಹುದ್ದೆಗಳಿಗೆ ಹೋಲಿಸಲು ಬರುವುದಿಲ್ಲ. ಆದುದರಿಂದ, ಅಖಿಲ ಭಾರತ ಸೇವೆಯ ಹುದ್ದೆಗಳ ವೇತನ ಶ್ರೇಣಿಗಳನ್ನು ರಾಜ್ಯ ಸರ್ಕಾರದ ಹುದ್ದೆಗಳ ವೇತನ ಶ್ರೇಣಿಗೆ ಹೋಲಿಸಿ ಅನ್ವಯಿಸುವ ಪ್ರಮೇಯವೇ ಉದ್ಭವಿಸುವುದಿಲ್ಲ. |
| (ಉ) | ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳನ್ನು ಪರಿಷ್ಕರಿಸಲು 7ನೇ ವೇತನ ಆಯೋಗವನ್ನು ಯಾವಾಗ ರಚಿಸಲಾಗುವುದು; ಈ ಸಂಬಂಧ ನೌಕರರುಗಳ ಬೇಡಿಕೆಗಳೇನು (ವಿವರ ನೀಡುವುದು) | ಈ ಮೇಲಿನ ಉತ್ತರ (ಆ) ರಲ್ಲಿ ತಿಳಿಸಿರುವಂತೆ, ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳ ಪರಿಷ್ಕರಣೆಯ ವಿಷಯವು ಸರ್ಕಾರದ ನೀತಿ ನಿರ್ಣಯಕ್ಕೆ ಸಂಬಂಧಿಸಿದ ವಿಷಯವಾಗಿರುತ್ತದೆ. ಆದುದರಿಂದ, ಈ ಬಗ್ಗೆ ಸಂದರ್ಭಾನುಸಾರ ರಾಜ್ಯದ ಆರ್ಥಿಕ ಸ್ಥಿತಿಗತಿಗಳನ್ನು ಗಮನದಲ್ಲಿರಿಸಿ ಕ್ರಮ ಕೈಗೊಳ್ಳಲಾಗುವುದು. |

ಸಂ: ಆಇ 3 ಎಸ್‌ಆರ್‌ಪಿ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ



Generated from eOffice by G JAGADEESHA, CMO-JS(GJ), JOINT SECRETARY, CMO on 14/02/2022 03:42 PM

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: (293+308+206)ಕ್ಕೆ ಪೂರಕ ಟಿಪ್ಪಣಿ

ಸಾಂಪ್ರದಾಯಿಕವಾಗಿ ರೂಢಿಯ ಪದ್ಧತಿಯಂತೆ ಹಾಗೂ ರಾಜ್ಯ ಸರ್ಕಾರದ ನೀತಿಯಂತೆ, ಕೇಂದ್ರ ಸರ್ಕಾರ ಅಥವಾ ಇತರೆ ರಾಜ್ಯ ಸರ್ಕಾರಗಳು ರಚಿಸುವ ವೇತನ ಆಯೋಗಗಳ ಶಿಫಾರಸ್ಸುಗಳನ್ನು ಅಥವಾ ವೇತನ ಪರಿಷ್ಕರಣೆಯ ಅವಧಿಯನ್ನು ಅನುಸರಿಸದೇ ತನ್ನದೇ ಸ್ವತಂತ್ರ ನೀತಿ ನಿಯಮಗಳನುಸಾರ ರಾಜ್ಯ ಸರ್ಕಾರವು ಕಾಲದಿಂದ ಕಾಲಕ್ಕೆ ರಚಿಸುವ ವೇತನ ಆಯೋಗ/ಅಧಿಕಾರಿ ವೇತನ ಸಮಿತಿಗಳಂತಹ ತಜ್ಞ ಸಮಿತಿಗಳ ಶಿಫಾರಸ್ಸಿನ ಬೆಳಕಿನಲ್ಲಿ ರಾಜ್ಯ ಸರ್ಕಾರಿ ನೌಕರರ ವೇತನ, ಭತ್ಯೆಗಳು ಮತ್ತು ಪಿಂಚಣಿಯನ್ನು ಕಾಲದಿಂದ ಕಾಲಕ್ಕೆ ಪರಿಷ್ಕರಿಸಿಕೊಂಡು ಬರಲಾಗುತ್ತಿದೆ. ಸಾಮಾನ್ಯವಾಗಿ ಕೇಂದ್ರ ಸರ್ಕಾರವು 10 ವರ್ಷಗಳ ಅವಧಿಗೊಮ್ಮೆ ಕೇಂದ್ರ ಸರ್ಕಾರಿ ನೌಕರರ ವೇತನ ಮತ್ತು ಪಿಂಚಣಿಗಳನ್ನು ಪರಿಷ್ಕರಣೆ ಮಾಡುತ್ತಿದ್ದು, ರಾಜ್ಯ ಸರ್ಕಾರವು ತನ್ನ ನೌಕರರ ವೇತನ ಮತ್ತು ಪಿಂಚಣಿಯ ಪರಿಷ್ಕರಣೆಯನ್ನು 5 ರಿಂದ 6 ವರ್ಷಗಳ ಅವಧಿಯಲ್ಲಿ ಮಾಡುತ್ತದೆ. ಆದುದರಿಂದ, ಕೇಂದ್ರ ಸರ್ಕಾರದ ನಿಯಮಗಳು, ಕೇಂದ್ರ ವೇತನ ಆಯೋಗ ಮತ್ತು ಇತರೆ ರಾಜ್ಯಗಳ ವೇತನ ಆಯೋಗಗಳ ಶಿಫಾರಸ್ಸುಗಳನ್ನು ರಾಜ್ಯ ಸರ್ಕಾರದ ನೌಕರರುಗಳಿಗೆ ಅನ್ವಯಿಸಿ ವೇತನ ಪರಿಷ್ಕರಣೆ ಮಾಡಲು ಬರುವುದಿಲ್ಲ. ಅಷ್ಟೇಅಲ್ಲದೇ, ಕೇಂದ್ರ ಸರ್ಕಾರದ ಹುದ್ದೆಯ ಸ್ವರೂಪ, ಸೇವಾ ನಿಬಂಧನೆಗಳು ಇತ್ಯಾದಿ ಅಂಶಗಳು, ರಾಜ್ಯ ಸರ್ಕಾರದ ಹುದ್ದೆಗಳ ಸ್ವರೂಪ ಮತ್ತು ಸೇವಾ ನಿಬಂಧನೆಗಳು ಪರಸ್ಪರ ಭಿನ್ನವಾಗಿದ್ದು, ಒಂದನ್ನೊಂದು ಹೋಲಿಕೆ ಮಾಡಲು ಬರುವುದಿಲ್ಲ.

ಮುಂದುವರೆದು, ಕರ್ನಾಟಕ ರಾಜ್ಯವೂ ಸೇರಿದಂತೆ, ಭಾರತದ ಇತರೆ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಖಿಲ ಭಾರತ ಸೇವೆಯ ಅಧಿಕಾರಿಗಳ ವೇತನ, ಭತ್ಯೆ ಮತ್ತು ಪಿಂಚಣಿಗಳನ್ನು ಕೇಂದ್ರ ಸರ್ಕಾರವು ರಚಿಸಿರುವ ಅಖಿಲ ಭಾರತ ವೇತನ ಮತ್ತು ಸೇವಾ ನಿಯಮಗಳ ಪ್ರಕಾರ ಕ್ರಮಬದ್ಧಗೊಳಿಸಿ ಪಾವತಿಸಲಾಗುತ್ತದೆ. ಅಖಿಲ ಭಾರತ ಸೇವೆಯ ಹುದ್ದೆಗಳನ್ನು ರಾಜ್ಯ ಸರ್ಕಾರದ ಅಧೀನದಲ್ಲಿ ಬರುವ ಹುದ್ದೆಗಳಿಗೆ ಹೋಲಿಸಲು ಬರುವುದಿಲ್ಲ.

..2

ಆದುದರಿಂದ, ಅಖಿಲ ಭಾರತ ಸೇವೆಯ ಹುದ್ದೆಗಳು ಮತ್ತು ಸದರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ವೇತನ ಮತ್ತು ಭತ್ಯೆಗಳನ್ನು ರಾಜ್ಯ ಸರ್ಕಾರದ ಹುದ್ದೆಗಳೊಂದಿಗೆ ಹೋಲಿಸಿ ಪರಿಷ್ಕರಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಈ ಮೇಲೆ ತಿಳಿಸಿದಂತೆ, ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳ ಪರಿಷ್ಕರಣೆಯ ವಿಷಯವು ಸರ್ಕಾರದ ನೀತಿ ನಿರ್ಣಯಕ್ಕೆ ಸಂಬಂಧಿಸಿದ ವಿಷಯವಾಗಿದ್ದು, ಈ ಬಗ್ಗೆ ಸಂದರ್ಭಾನುಸಾರ ರಾಜ್ಯದ ಆರ್ಥಿಕ ಸ್ಥಿತಿಗತಿಗಳನ್ನು ಗಮನದಲ್ಲಿರಿಸಿ ಕ್ರಮ ಕೈಗೊಳ್ಳ ಬೇಕಾಗಿರುತ್ತದೆ.

**ಸಂ: ಆಇ 3 ಎಸ್‌ಆರ್‌ಪಿ 2022**

Uma

(ಉಮಾ.ಕೆ.)

ಸರ್ಕಾರದ ಉಪ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಸೇವೆಗಳು-2).